Regd No B G 155

30—3—1965

ಸತ್ಯವಾದಿ

48th Year

Satyavadi

DAILY

MYSORE

ಸಂಸ್ಥಾಪಕರು — ಅರಮನೆ ಸಿಂಸ್ಕೇಥಾರ್ ಎಂ ವಿ ಸುಬ್ಬರಾಯುರ್ಲು ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್

2 ಪೈಸೆ

ಶಾಸ್ತ್ರಿಗಳ ಸೂಚನೆ

ನವದೆಹಲಿ — ಹಿಂದಿ ಮಾತನಾಡುವ ಮತ್ತು ಹಿಂದಿ ಮಾತನಾಡದ ಜನರಲ್ಲಿ ತೃಪ್ತಿಕರವಾದ ಮಧ್ಯ ಮಾರ್ಗ ಕಂಡು ಹಿಡಿಯುವಲ್ಲಿ ಕೇಂದ್ರ ಶಾಸ್ತ್ರಿಗಳು ಶಾಸ್ತ್ರಿ, ಗಳು ಹೇಳಿದರು — ಇಂಗ್ಲೀಷನ್ನು ಅಧಿಕೃತ ಭಾಷೆಯಾಗಿ ಮುಂದುವರಿಸಲು ರಾಜ್ಯಾಂಗ ತಿದ್ದುಪಡಿ ಮಾಡಬೇಕೆಂಬ ರಾಜಗೋಪಾಲಾಚಾರಿಯವರ ಸಲಹೆ ಯನ್ನು ಅಮಲು ಬರಲಿಲ್ಲ.

★

ವೆಚ್ಚ ಏರಿಕೆ

ಕಲ್ಕತ್ತಾ — ಅಡಳಿತ ಸೇವೆ ಕಡೆ ಕಡೆಯಲ್ಲಿ ಭಾರತ ಸರ್ಕಾರದ ಖರ್ಚು ಹೆಚ್ಚಿದೆ ಎಂದಿದೆ : 64-65 ರಲ್ಲಿ ರೂ 82-17 ಕೋಟಿ ಇದ್ದದ್ದು 65-66 ರಲ್ಲಿ 91.36 ಕೋಟಿಗೆ ಹೆಚ್ಚುವ ನಿರೀಕ್ಷೆ ಇದೆ, 54-55 ರಲ್ಲಿ ಕೇವಲ 30-62 ಕೋಟಿ ರೂಗಳಿದ್ದವು

★

ಸಂಭಾವನೆ

ತಿರುಪತಿ — ಇಲ್ಲಿಗೆ ನಡೆದ ವಿಂಶತಿ ಸಭೆ ಯಲ್ಲಿ ಅಧ್ಯಕ್ಷರಿಗೆ ರೂ ೧೫೦೦ ಉಪಾಧ್ಯಕ್ಷರಿಗೆ ರೂ 50 ಸಂಭಾವನೆ ಕೊಡಲು ನಿರ್ಧರಿಸಲಾಯಿತು

★

ಬೆಂಗಳೂರು — ಚಿಕ್ಕ ವ್ಯವಸಾಯ ಕ್ಷೇತ್ರಗಳಲ್ಲಿ ವಿದ್ಯುಚ್ಛಕ್ತಿ ಉಳುವ ಯಂತ್ರಗಳನ್ನು ತಯಾರಿಸುವ ಒಂದು ನವೀನ ರೀತಿಯ ಕಾರ್ಖಾನೆಯು ಸ್ಥಾಪಿಸಲಾಗುವುದೆಂದು ಮುಖ್ಯಮಂತ್ರಿಗಳು ಹೇಳಿದರು.

★

ಶಾಲೆಯ ಪಂಚಾಂಗ

ದೈವಜ್ಞ ಶಿರೋಮಣಿ

ಆಸ್ಥಾನಮಹಾವಿದ್ವಾನ್ ಧರ್ಮಾಧಿಕಾರಿ

ರಾಜಕಾರ್ಯಾಸಕ್ತ, ಜ್ಯೋತಿಶ್ಚಿದ್ವೈಜಯಂತಿ

ಸಂಪತ್ಕೃಷ್ಣಜೋಯಿಸರಿಂದ

ಬುಧವಾರ ಚತುರ್ದಶಿ ಪೂರ್ಣಾ

ಬಂಧನ

ಕಲ್ಕತ್ತಾ — ಕಾರ್ಪೊರೇಷನ್ ಚುನಾವಣೆ ಮೊನ್ನೆ ನಡೆದಾಗ ಸಿಕ್ಕಾಪಟ್ಟೆ ನಡತೆ ಮತ್ತು ಪಕ್ಷಪಾತ ಎಸಗಿದುದಕ್ಕಾಗಿ 48 ಮಂದಿ ದಸ್ತಗಿರಿ ಮಾಡಲ್ಪಟ್ಟರು.

★

ರಾಜಾಜಿ ಸುದ್ದಿ

ಧನಕನಾಲ್ — ಒರಿಸ್ಸಾ ಸ್ವತಂತ್ರ ಪಕ್ಷದ ಸಮ್ಮೇಳನವನ್ನು ಮೊನ್ನೆ ಉದ್ಘಾಟಿಸುತ್ತಾ, ರಾಜಗೋಪಾಲಾಚಾರಿಯವರು— ಸರಕಾರವು ತಪ್ಪು ಮಾರ್ಗದಿಂದ ಅಭ್ಯುದಯ ಕಂಡು ಹೊಂಟಿದೆ ಎಂದರು ; ನಡುಗೆ ಬೇರೆ ಸರಕಾರ ಬೇಕೆಂದು ಹೇಳಿದರು.

★

ಮಸೂದೆ ವಾಪಸು ಪಡೆಯಲು ಒತ್ತಾಯ

ಪಾಟ್ನಾ — ಬೀಹಾರು ಶಾಸನ ಸಭೆಯಲ್ಲಿ, ಸದಸ್ಯರಿಗೆ ದಿನದ ಅಲೋಯನ್ಸನ್ನು ರೂ 15 ರಿಂದ 20 ಕ್ಕೆ ಹೆಚ್ಚಿಸಬೇಕೆಂಬ ಮತ್ತು ವಾಹನ ಅಲೋಯನ್ಸು ರೂ 50 ಕೊಡಬೇಕೆಂಬ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಬೀಹಾರು ಜಿಲ್ಲಾ ಕಾಂಗ್ರೆಸ್ಸು ಸಮಿತಿಗಳ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳ ಸಂಮೇಳನದಲ್ಲಿ ನಿರ್ಧರಿಸಲಾಗಿದೆ.

★

ಜಂಡೀಧರ — ಹೆಚ್ಚು ಬುದ್ಧಿಶಕ್ತಿ ಗಳಾದ ವಿದ್ಯಾರ್ಥಿಗಳಿಗೆ ಕೆಲ ರೀತಿಯ ಸಹಾಯ ನೀಡಲು ಸರ್ಕಾರ ನಿರ್ಧರಿಸಿದೆ.

ನವದೆಹಲಿ — ನಾಲ್ಕನೇ ಯೋಜನೆ ಕಾಲದಲ್ಲಿ ಹೆಚ್ಚಾಗಿ ಖನಿಜ ಶೋಧನೆಗೆ ಅವಶ್ಯಕವಾದ 4 ಕೋಟಿ ರೂಗಳ ಸಾಲಕರಣಿಗಳನ್ನು ಕೆನಡಾ ಸರ್ಕಾರ ಒಪ್ಪಿದೆ.

ರಾಬರ್ಟ್ — ವಿರೋಧಕಾರಿ ಕಾರ್ಯಕಾರ್ಯದರ್ಶಿಯಲ್ಲಿ ತೊಡಗಿಸಿದ್ದ ಆರೋಪನೆಗಾಗಿ 14 ಮಂದಿಯನ್ನು ಗಲ್ಲಿಗೇರಿಸಲಾಯಿತು.

ವಾರ್ತಾ ವಿಶೇಷಗಳು

ಬೆಂಗಳೂರು — ನಂಜಿಂಹರಾಜಾ ಕಾಲೊನಿಯಲ್ಲಿರುವ ಶ್ರೀಕೃಷ್ಣ ಸೇವಾ ಶ್ರಮಕ್ಕೆ ಗೌರ್ನರ್ ಶ್ರೀ ನಾಗೇಶ್ ಭೇಟಿ ಕೊಟ್ಟು, ಅಲ್ಲಿಯ ಔಷಧಾಲಯಕ್ಕೆ ರೂ 1500 ಉದಾರ ದಾನವಾಡಿದರು.

ಕಲ್ಕತ್ತಾ — ದಕ್ಷಿಣ ಬೊಂಬಿಯಿಂದ ಕೆಲವು ಭಾಗಗಳ ಮೇಲೆ ಪಾಕಿಸ್ತಾನ್ ಸಶಸ್ತ್ರ ಸೈನಿಕರು ಗುಂಡು ಹಾರಿಸಿದರು

ನವದೆಹಲಿ — ದೇಶದಲ್ಲಿ ಒಂದು ವರ್ಷದಿಂದ ಭ್ರಷ್ಟಾಚಾರ ವಿರುದ್ಧ ತೀವ್ರ ಕಾರ್ಯಕ್ರಮ ನಡೆಯುತ್ತಿದ್ದರೂ ಸೂಕ್ತ ಫಲ ದೊರೆತಿಲ್ಲವೆಂದು ಗೃಹಮಂತ್ರಿ ಶ್ರೀ ನಂದಾ ಹೇಳಿದರು.

ಬೊಂಬಾಯಿ — ಶಾಂತಿ ಕಾರ್ಯಗಳಿಗಾಗಿ ಪರಮಾಣು ಶಕ್ತಿ ಅಭಿವೃದ್ಧಿ ಪಡಿಸಲು ಭಾರತವು ಸ್ವೀಡನ್ನೊಡನೆ ಸಹಕಾರ ಒಪ್ಪಂದ ಮಾಡಿಕೊಂಡಿದೆ

ಕಲ್ಕತ್ತಾ — ಪೂರ್ವ ಪಾಕಿಸ್ತಾನ್ ರೈಫಲ್ಸಿನವರು ಟಿ ಭಾರ್ ಮುಂತಾದ ಕಡೆ ಗುಂಡುಹಾರಿಸುವುದನ್ನು ಮುಂದುವರಿಸುತ್ತಲೇ ಇದ್ದಾರೆಂದು ಪ್ರಕಟವಾಗಿದೆ

ತಿರುವನಂತಪುರಂ — ಅಧಿಕೃತ ಭಾಷಾ ಸಮಸ್ಯೆ ಬಗ್ಗೆ ಭಾರತ ಸರಕಾರವು ಕಾಸನ ಭವನದಲ್ಲಿ ನಡೆಸುವ ವಿಷಯದಲ್ಲಿ ಸಂದೇಹವಿಲ್ಲವೆಂದು ಮದ್ರಾಸು ಮುಖ್ಯ ಮಂತ್ರಿಗಳು ಹೇಳಿದರು.

ಬೆಂಗಳೂರು — ನಗರದ ಬಸ್ ಚಾರ್ಜು ಹೆಚ್ಚಿಸುವದಂ ವಿರುದ್ಧ ಜಳವಳ ಪ್ರಾರಂಭಿಸಲು ಎಸ್ಸೆಸ್ಟಿ ನಿರ್ಧರಿಸಿದೆ

ವಿಜಯನಗರಂ — ರಾಜ್ಯದಾದ್ಯಂತ ರಾಜ್ಯಾಧ್ಯಕ್ಷರಂ ಅಡಳಿತ ವಿರೋಧಿ ಪ್ರತಿಭಟನೆಯ ಜಳವಳದ ಪ್ರಾರಂಭವಾಗಿ ಏಪ್ರಿಲ್ 6 ರಂದು ಪ್ರತಿಭಟನಾ ದಿನವಾಗಿ ಆಚರಿಸಲು ಕರೆಯನ್ನಿತ್ತಿರುವರು

ವಾಷಿಂಗ್ಟನ್ — ಅಮೇರಿಕಾದ ಬಹು ಬಡತನದಲ್ಲಿ ವಾಸಿಸುತ್ತಿರುವ ಭಾಗಗಳಲ್ಲಿನ 25 ಲಕ್ಷ ಜನರಿಗೆ ಸಹಾಯ ನೀಡುವ ಸೂಚನೆ ಹೊರಡಿಸಲಾಗಿದೆ.

ನಮ್ಮ ಯೋಧರು

ತೇಜಪುರ — ನೇಫಾದಲ್ಲಿ ಕರ್ತವ್ಯ ಶತ್ಪರರಾಗಿರುವ ನಮ್ಮ ಯೋಧರು ದಟ್ಟವಾದ ಅರಣ್ಯದಲ್ಲಿಯೂ ಸಹ ಇಂದು ನಿರಾತಂಕವಾಗಿ ಜೀವನ ಸಾಗಿಸುವುದನ್ನು ಕಲಿತುಕೊಂಡಿದ್ದಾರೆ — ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾಗಿರುವ ನಮ್ಮ ಯೋಧರಿಗೆ ಶತ್ರುಗಳನ್ನು ಹೊಡೆದೋಡಿಸಲು ಮೊದಲಿಗಿಂತಲೂ ಹೆಚ್ಚು ಆತ್ಮವಿಶ್ವಾಸ ಹೊಂದಿದಾರೆ

★

ಪಾಕಿಸ್ತಾನೀಯಂತರಾಷ್ಟ್ರೀಯ ಪರಿಸ್ಥಿತಿನ ವಿಮರ್ಶನವು ಅವರ ಕಣ್ಣಿನೆಯಲ್ಲಿ ಸಿಡಿದು ಇಪ್ಪತ್ತೈದು ಮಂದಿ ಪ್ರವಾಣ ಹೊಂದಿದರೆಂದು ಕಂಠಾಚಿ ವಾರ್ತೆ.

ವಾಷಿಂಗ್ಟನ್ನಿನಿಂದ ಬಂದಿರುವ ಪಂದಿ ಪ್ರಕಾರ ಅಲ್ಬಾಮದಲ್ಲಿ ಆದ ಶ್ವೇತ ಮಹಿಳೆಯ ಸಂಬಂಧದಲ್ಲಿ ಕೂ ಕ್ಲಕ್ಸ್ ಕ್ಲಾನಿನ ಸಾಲ್ಕು ಮಂದಿಯನ್ನು ದಸ್ತಗಿರಿ ಮಾಡಿಆಗಿದೆಯೆಂದು ಅಧ್ಯಕ್ಷ ಜಾನ್ಸನ್ನರು ಹೇಳಿದರು.

ಮೈಸೂರು — ಪಾಂಚಭೌತಿಯ ವಿಶೇಷ ವಿಭಾಗದ 65-66 ನೇ ಸಾಲಿನ ಬಜೆಟ್ ಅಂಚಾಜು ಮತ್ತು 64-65 ರ ಪರಿಷ್ಕರಿಸಿದ ಅಂಚಾಜನ್ನೂ ಪರಿಶೀಲಿಸಲು ತಾ|| 31 ಬುಧವಾರ ಸಂಜೆ ಸಭೆ ಸೇರಲಾಗುತ್ತದೆ.

ಕೈರಾನಂ ಕೊಲೆಯ ಪ್ರಮುಖ ವ್ಯಕ್ತಿ ಎಂದು ಹೇಳಲಾದ ಸುಣಾಸಿಂಗರ ಗಂನ್ನು ಧನಗಾತಿನಿಂದ ಬಟ್ಟಿಂಡ ತಿಗೆ ಬಟ್ಟಿಂಡುವಿಗೆ ವಿಮಾನದಲ್ಲಿ ಕರೆತಂದಿಯು — ಅವನ ಮೇಲೆ ಭಾರತದ ಎಕ್ಸ್‌ಟ್ರಾಡಿಟಿಕ್ ಕಾರ್ಯಕ್ರಮ ನಡೆಯುತ್ತಿದೆ.

ಟೋಕಿಯೋದಿಂದ ಬಂದ ವಾರ್ತೆ ಪ್ರಕಾರ ಸಾವಿರ ಅಡಿಗಳ ಎತ್ತರದಿಂದ ಒಬ್ಬ ಜಪಾನಿ ಫೋಟೋಗ್ರಾಫರು ಬಿದ್ದುಬತ್ತಿದರು. ಹೆಲಿಕಾಪ್ಟರು ಅವನ್ನು ಡ್ಡುದು ಸೆಡಿದುಬಿದ್ದಿತು.

ಕೂರತಲ್ಲ

(ಮುಂದುವರಿದುದು)

ದೇವಾಲಯದಲ್ಲಿ ಪೂಜೆ ನಡೆಸಿದನಂತರ, ತನ್ನ ಯಜಮಾನರಾದ ಶ್ರೀ ರಾಮಾನುಜರು ಸನ್ಯಾಸಿಯಾಗಿ ಶ್ರೀರಂಗಕ್ಕೆ ಹೊರಟುಹೋದರೆಂದು ಕೇಳಿ ಹೆಂಬಾ ನುನಸೊಡಮುಕೊಂಡನು : ತಕ್ಷಣ ಅಲ್ಲಿಗೆ ಹೋಗಲು ದಂಪತಿಗಳು ನಿರ್ಧರಿಸಿದರು : ಅವರು ಅಷ್ಟು ದೂರವನ್ನೂ ನಡೆದುಕೊಂಡುಹೋಗಲು ಹೊಂಟರು : ರಾತ್ರಿ ಒಂದು ದಟ್ಟ ಅಡವಿಗೆ ಬಂದಾಗ ಕೂರೇಶರು ಪತ್ನಿ ಆಂಡಾಳ್ ಭೀತಿಗೊಂಡಿಳು ; ಹೆದರಲು ಏನೂ ಕಾರಣವಿಲ್ಲವೆಂದೂ, ತಮ್ಮ ಹತ್ತಿರ ಬೆಲೆಬಾಳುವ ಬೆಲೆ ಜಾಳುವ ಯಾವ ವಸ್ತುವೂ ಇಲ್ಲದಿರುವಾಗ ಯಾರೂ ತಮ್ಮನ್ನು ಬಾಧೆಪಡಿಸುವುದಿಲ್ಲವೆಂದೂ ಪತ್ನಿಯನ್ನು ಸಮಾಧಾನ ಪಡಿಸಿದರು : ಆಗ ಆಂಡಾಳ್, ತನ್ನ ಪತಿಗೆ ನೀರು ಕುಡಿಯಲು ತನ್ನೊಡನೆ ತಂದಿದ್ದ ಚಿನ್ನದ ಬಟ್ಟಲನ್ನು ದೂರಕ್ಕೆ ಬಿಸಾಡಿದಳು.

ಶ್ರೀರಂಗದಲ್ಲಿ ಅವರನ್ನು ಶ್ರೀ ರಾಮಾನುಜರು ಆದರದಿಂದ ಸ್ವಾಗತಿಸಿ ಅವರು ವಾಸಿಸಲು ಒಂದು ಮನೆಯನ್ನು ಕೊಡಿಸಿಕೊಟ್ಟರು : ಅನುದಿನವೂ ನೂರಾರು ಮಂದಿಗೆ ಆಹಾರ ಕೊಡುತ್ತಿದ್ದ ಕೂರೇಶರು ಈಗ ಪ್ರತಿದಿನ ಬೆಳಿಗ್ಗೆ ಒಂದು ಗುಪ್ತ ಗೃಹದಲ್ಲಿ ಮನೆಮನೆಗೂ ಹೋಗಿ ಭಿಕ್ಷ ಬೇಡಿ ಜೀವಿಸುತ್ತಿದ್ದರು : ದಿನನಿತ್ಯ ಶ್ರೀ ರಾಮಾನುಜರು ಪಾಠದ ಹತ್ತಿರ ಕುಳಿತು ದೇವರ ಮಹಿಮೆಯನ್ನು ಹಾಡುತ್ತಿದ್ದರು.

ಒಂದು ದಿವಸ ವಿಪರೀತ ಮಳೆ ಬಂದು ಅವರು ಭಿಕ್ಷಕ್ಕೆ ಹೋಗಲಾಗದೆ ಆಹಾರವಿಲ್ಲದೀಜೇಕಾಗಿ ಬಂದಿತು ; ತನ್ನ ಪತಿಯು ಆಹಾರವಿಲ್ಲದೆ ಹಸಿವಿನಿಂದ ಸಾಯುತ್ತಿದ್ದುದನ್ನು ಆಂಡಾಳ್‌ಗೆ ನೋಡಲಾಗದೆ, ಶ್ರೀ ರಂಗನಾಥದೇವರಲ್ಲಿ ಪ್ರಾರ್ಥನೆ ಮಾಡಿದಳು ; ಕೂಡಲೇ ದೇವಾಲಯದ ಒಬ್ಬ ಪೂಜಾರಿಯು ದೇವಾಲಯದಿಂದ ರುಚಿಕರವಾದ ಆಹಾರವನ್ನು ತಂದಿಟ್ಟನು ; ಕೂರೇಶರಿಗೆ ಆಶ್ಚರ್ಯವಾಯಿತು : ಆಹಾರಕ್ಕಾಗಿ ದೇವರನ್ನು ಪ್ರಾರ್ಥಿಸಿದೆಯಾ ಎಂದು ಪತ್ನಿಯನ್ನು ಕೇಳಿದರು ; ಆಕೆಯು ಹೌದೆಂದಳು ; ಆಗ ಅವರು ಆಹಾರಕ್ಕಾಗಿ ಪ್ರಾರ್ಥನೆ ಮಾಡಬಾರದೆಂದು ಹೇಳಿದರು ; ಮತ್ತು ಆಗ ಪವಿತ್ರವಾದ ಪ್ರಸಾದವು ದೊರಕುವುದರಿಂದ, ತಾವು ಸ್ವಲ್ಪ ತೆಗೆದುಕೊಂಡು ಉಳಿದ ಎಲ್ಲರನ್ನೂ ಸೇವಿಸಲು ಅಲ್ಲಿಗೆ ಹೇಳಿದರು ! ಆಕೆಯು ಹಾಗೆಯೇ ಮಾಡಿದಳು : 10 ತಿಂಗಳ ನಂತರ ಅವಳಿಜವಳಿ ಗಂಡುಮಕ್ಕಳನ್ನು ಪ್ರಸವಿಸಿದಳು ; ಇದು ದೇವಾಲಯದ ಪ್ರಸಾದದ ಮಹಿಮೆ ಎನ್ನಲಾಗಿದೆ. (ಮುಂದುವರಿಯುವುದು

Help The Gorakshana

★

"ಗೋರಕ್ಷಣಾ" ಕ್ಕೆ ಬೆಂಬಲಿಗರಾಗಿರಿ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಿಂದಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ವ್ಯಾಪಾರ ರಹಿತ ಪತ್ರಿಕೆ.

ವಾರ್ಷಿಕ ಚಂದಾ 5ರೂ ಸೈಸೆ ; "ಗೋರಕ್ಷಣಾ" ಕ್ಕೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣಾ ಅಫೀಸು ಜಗನ್ಮೋಹನರಾಜಪುರಂ, ಮೈಸೂರು 4

ವುಡ್‌ಲಾಂಡ್ 26-3-65 ರಿಂದ

ಶಿ ನ ಅವೋಘ ಪ್ರಾರಂಭ

ಬೊಂಬಾಯಿನಲ್ಲಿ ಲಕ್ಷಾಂತರ ಜನ ನೋಡಿ ಮುಕ್ತ ಕಂಠದಿಂದ ಹೊಗಳುತ್ತಿರುವ

ಅತ್ಯವೋಘ ಹಿಂದಿ ಚಿತ್ರ ರತ್ನ

ಬಹು ಬೇಟಿ ★ Bahu-Beti

ಪಾತ್ರ- ಅಶೋಕ್‌ಕುಮಾರ್, ಮಾಲಾಸಿನ್ಹಾ, ಜಾಯ್ ಮುಖರ್ಜಿ, ಮುಕಪ್ರಾಣ್

ಪ್ರತಿದಿನ 3 ಪ್ರದರ್ಶನಗಳು

ಅಪೆರಾ— ಜಯಪ್ರದ 4 ನೇ ವಾರ

ನಾಗ ಪೂಜಾ (ಕನ್ನಡ)

ಪಾತ್ರಾಗಣ— ರಾಜಕುಮಾರ್, ಲೀಲಾವತಿ ರಾಜಶ್ರೀ, ರಾಘವೇಂದ್ರರಾವ್

ಅವೋಘ ಪೌರಾಣಿಕ ಕನ್ನಡ ಚಿತ್ರ — ದಿನ 3 ಆಟಗಳು

SHAKTI

SUDHA

A Superb Tonic



ಗೋರಕ್ಷಣಾ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ !

Edited, Printed & Published by the Proprietor
Dharma Prachara Nirata M S Krishna Rao
the Satyavadi Post Gamarajapuram Mysore 4